**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಆರ್.ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಪಹಣಿ |
| ನಿ.ಪಿ.–2 | ಮ್ಯೂಟೇಷನ್ |
| ನಿ.ಪಿ.–3 | ಪಹಣಿ |
| ನಿ.ಪಿ.–4 | ಬಾಕಿ ರಿಜೇಸ್ಟರ್ |
| ನಿ.ಪಿ.–5 | ತೆರಿಗೆ ನಿರ್ಧಾರಣ ಪಟ್ಟಿ |
| ನಿ.ಪಿ.–6 ಮತ್ತು 7 | ಪಹಣಿಗಳು |
| ನಿ.ಪಿ.–8 | ಮ್ಯೂಟೇಷನ್ |
| ನಿ.ಪಿ.–9 | ಜಮೀನು ಹಕ್ಕಿನ ದಾಖಲೆ |
| ನಿ.ಪಿ.–10 ಮತ್ತು 11 | ತಿಳುವಳಿಕೆ ಪತ್ರಗಳು |
| ನಿ.ಪಿ.–12 ಮತ್ತು 13 | ಅಂಚೆ ಸ್ವೀಕೃತಿಗಳು |
| ನಿ.ಪಿ.–14 ಮತ್ತು 15 | ಅಂಚೆ ರಶೀದಿಗಳು |

**ಈ ಹಂತದಲ್ಲಿ ಸಾಕ್ಷಿ ಕಡೆಯಿಂದ ಮತ್ತಷ್ಟು ದಾಖಲೆಗಳನ್ನು ಹಾಜರು ಪಡಿಸುವ ಸಲುವಾಗಿ ವಾದಿ ಪರ ವಕೀಲರು ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ.**